# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೪ಎ<br>Part – IVA | ಬೆಂಗಳೂರು, ಗುರುವಾರ, ೦೮, ಅಕ್ಟೋಬರ್, ೨೦೨೬ (ಆಶ್ವಯುಜ , ೧೬, ಶಕವರ್ಷ, ೧೯೪೮)<br>BENGALURU, THURSDAY, 08, OCTOBER, 2026 (AASHWAYUJA , 16, SHAKAVARSHA, 1948) | ಸಂ. ೧೦೬೬<br>No. 1066 |
|---|---|---|


**ಕರ್ನಾಟಕ ಸರ್ಕಾರ**

ಸಂಖ್ಯೆ: RDPR 622 GPA 2026 (P1)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಡಾII ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:08-10-2026.

## ಅಧಿಸೂಚನೆ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರ ಪ್ರಕರಣ 66, 67, 68, 69, 70, 97, 199, 199 ಎ, 199ಬಿ, 199ಸಿ, 200, 201 ಮತ್ತು 202ನೇ ಪ್ರಕರಣಗಳೊಂದಿಗೆ ಓದಿಕೊಂಡಂತೆ ಪ್ರಕರಣ 311ರ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಫೀಜುಗಳು) ನಿಯಮಗಳು, 2025 ನ್ನು ತಿದ್ದುಪಡಿ ಮಾಡಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಶುಲ್ಕಗಳು) (ತಿದ್ದುಪಡಿ) ನಿಯಮಗಳು, 2026 ರ ಕರಡನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:RDPR 622 GPA 2026, ದಿ: 22.07.2026ರ ಮೂಲಕ ದಿನಾಂಕ: 22.07.2026ರ ಕರ್ನಾಟಕ ರಾಜ್ಯ ಪತ್ರದ ವಿಶೇಷ ರಾಜ್ಯ ಪತ್ರಿಕೆಯ ಭಾಗ-IV ಎ ರಲ್ಲಿ ಪ್ರಕಟಿಸಿ, ಸದರಿ ನಿಯಮಗಳಿಂದ ಬಾಧಿತರಾಗಿರಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಸದರಿ ನಿಯಮಗಳು ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಏಳು ದಿನಗಳ ಒಳಗಾಗಿ ಸಲ್ಲಿಸಲು ಆಹ್ವಾನಿಸಲಾಗಿರುತ್ತದೆ;

ಮತ್ತು ದಿನಾಂಕ: 22.07.2026 ರಂದು ಸದರಿ ರಾಜ್ಯ ಪತ್ರವನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡು ನಿಯಮಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಾರ್ವಜನಿಕರಿಂದ ಬಂದ ಆಕ್ಷೇಪಣೆ/ಸಲಹೆಗಳನ್ನು ಪರಿಗಣಿಸಿರುವುದರಿಂದ;

ಪ್ರಸ್ತುತ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರ ಪ್ರಕರಣ 66, 67, 68, 69, 70, 97, 199, 199 ಎ, 199ಬಿ, 199ಸಿ, 200, 201 ಮತ್ತು 202ನೇ ಪ್ರಕರಣಗಳೊಂದಿಗೆ ಓದಿಕೊಂಡಂತೆ ಪ್ರಕರಣ 311ರ ಮೂಲಕ

ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡಂತೆ ನಿಯಮಗಳನ್ನು ರಚಿಸುತ್ತದೆ:-

## ನಿಯಮಗಳು

**1.ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಶುಲ್ಕಗಳು) (ತಿದ್ದುಪಡಿ) ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ.

**2. ನಿಯಮ 2ರ ತಿದ್ದುಪಡಿ.-** ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ತೆರಿಗೆ, ದರ ಮತ್ತು ಶುಲ್ಕಗಳು) ನಿಯಮಗಳು, 2025 (ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲಖಿಸಲಾಗಿದೆ), ನಿಯಮ 2 ರ ಖಂಡ (9) ರಲ್ಲಿ "ಲಗತ್ತಿಸಿರುವ ನಮೂನೆ" ಎಂಬ ಪದಗಳ ನಂತರ "ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ರಲ್ಲಿ ನಿಗಧಿಪಡಿಸಿರುವ ನಮೂನೆ 11ಎ ಹಾಗೂ ನಮೂನೆ 11ಬಿ" ಎಂಬ ಪದಗಳು, ಅಕ್ಷರಗಳು, ಅಂಕಿಗಳು ಮತ್ತು ಆವರಣಗಳನ್ನು ಸೇರಿಸತಕ್ಕದ್ದು.

**3. ನಿಯಮ 5ರ ತಿದ್ದುಪಡಿ.-** ಸದರಿ ನಿಯಮಗಳ,-

(1) ಉಪನಿಯಮ (1) ರಲ್ಲಿ 15 ಕೆಲಸದ ದಿನದೊಳಗೆ ಬದಲಾಗಿ 22 ಕೆಲಸದ ದಿನದೊಳಗೆ ಎಂದು ಪ್ರತ್ಯಾಯೋಜಿಸತಕ್ಕದ್ದು.

(2) ಉಪನಿಯಮ (1) ರ,-

(i) ಖಂಡ (ಅ) ರ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು; -

"ಪರಂತು, ನೋಂದಾಯಿತ ದಾಖಲೆಗಳ ಆಧಾರದಲ್ಲಿ ಅನುಬಂಧ - 1 ರ ಕ್ರಮ ಸಂಖ್ಯೆ 1 ರ ಅನ್ವಯ ದಾಖಲೆಗಳನ್ನು ಪಡೆದು ನಿವೇಶನ ಅಥವಾ ಕಟ್ಟಡಗಳಿಗೆ ನಮೂನೆ-11ಎ ವಿತರಿಸತಕ್ಕದ್ದು. ನೋಂದಾಯಿತ ದಾಖಲೆಗಳನ್ನು ಒದಗಿಸದ ಸಂದರ್ಭದಲ್ಲಿ ಅನುಬಂಧ -1 ರ ಕ್ರಮ ಸಂಖ್ಯೆ 1-ಎ ರಲ್ಲಿನ ದಾಖಲೆಗಳನ್ನು ಪಡೆದು ದಿನಾಂಕ 07.04.2025 ರ ಪೂರ್ವದಲ್ಲಿ ಸೃಜಿಸಲಾಗಿರುವ ಕಟ್ಟಡಗಳಿಗೆ ಮಾತ್ರ ನಮೂನೆ 11ಎ ವಿತರಿಸತಕ್ಕದ್ದು.

ಮತ್ತು ಪರಂತು, ಕಟ್ಟಡ ಮತ್ತು ಅದಕ್ಕೆ ಹೊಂದಿಕೊಂಡಿರುವ ಪ್ರದೇಶ ನಾಲ್ಕು ಸಾವಿರ ಚದರಡಿಗಳವರೆಗಿನ ವಿಸ್ತೀರ್ಣ ಮೀರತಕ್ಕದ್ದಲ್ಲ."

(ii) ಖಂಡ (ಆ) ರಲ್ಲಿ 'ನಿಗಮದ' 'ವಸತಿ ನಿಗಮದ ಮೂಲಕ' ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(iii) ಖಂಡ (ಏ) ರ ಉಪಖಂಡ (ii) ರ ಕ್ರಮ ಸಂಖ್ಯೆ (1) ರ "ಗ್ರಾಮ ಪಂಚಾಯತಿಯ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ" ಎಂಬ ಪದಗಳ ಪೂರ್ವದಲ್ಲಿ "ದಿನಾಂಕ 24.04.2025 ರ ಪೂರ್ವದಲ್ಲಿ ಕಂದಾಯ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ ಫಲಾನುಭವಿಗಳಿಗೆ ನೀಡಿರುವ ಹಕ್ಕುಪತ್ರ ಪಡೆದು ಅನುಬಂಧ-1ರಲ್ಲಿ ನಿಗಧಿಪಡಿಸಿರುವಂತಹ ದಾಖಲೆಗಳನ್ನು ಪಡೆದು ತಂತ್ರಾಂಶದಲ್ಲಿ ದಾಖಲಿಸಿ ನಮೂನೆ 11ಎ ವಿತರಿಸತಕ್ಕದ್ದು. ದಿನಾಂಕ 24.04.2025 ತರುವಾಯ" ಎಂಬ ಪದಗಳು, ಅಂಕಿಗಳು ಮತ್ತು ಅಕ್ಷರಗಳನ್ನು ಸೇರಿಸತಕ್ಕದ್ದು.

(iv) ಖಂಡ (ಅಃ) ನಂತರ ಈ ಕೆಳಕಂಡಂತೆ ಖಂಡವನ್ನು ಸೇರಿಸತಕ್ಕದ್ದು:-

"**(ಕ) ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 18 ರಡಿಯಲ್ಲಿ ಮಂಜೂರಾದ ಆಸ್ತಿ;** ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮನೆ ನಿರ್ಮಿಸಲು ಮನೆದಳ, ಕಣಮನೆ ನಿವೇಶನಗಳನ್ನು ಕಂದಾಯ ಇಲಾಖೆ ಹಾಗೂ ಕಂದಾಯ ಇಲಾಖೆಯು ಅಧಿಕೃತಗೊಳಿಸಿದ ಸಕ್ಷಮ ಪ್ರಾಧಿಕಾರದಿಂದ ಹಕ್ಕು ಪತ್ರಗಳನ್ನು ವಿತರಿಸಲಾಗಿದ್ದು ಇಂತಹ ಆಸ್ತಿಗಳು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 18 ರಡಿಯಲ್ಲಿ ಮಂಜೂರಾದ ಆಸ್ತಿಗಳು ಎಂದು ವರ್ಗೀಕೃತವಾಗಿರತಕ್ಕದ್ದು."

(3) ಉಪನಿಯಮ (2) ರ, -

(i) ಖಂಡ (i) ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಎಂದರೆ. –

"(i) ನಿಯಮ 5 ರ ಉಪನಿಯಮ (1) ರ ಖಂಡ (ಏ) ಮತ್ತು ನಿಯಮ 5ರ ಉಪನಿಯಮ (1) ರ ಖಂಡ (ಎ) ಅನ್ನು ಹೊರತುಪಡಿಸಿ ಗ್ರಾಮ ಪಂಚಾಯತಿ ಗ್ರೇಡ್-I / ಗ್ರೇಡ್-II ಕಾರ್ಯದರ್ಶಿಗಳ ಲಾಗಿನ್‌ನಲ್ಲಿ ಅರ್ಜಿ ಸ್ವೀಕರಿಸಿದ ನಂತರ ಸಾರ್ವಜನಿಕ ಆಕ್ಷೇಪಣೆಗಳನ್ನು ಆಹ್ವಾನಿಸಲು ತಂತ್ರಾಂಶದ ಮೂಲಕ ಸ್ವಯಂಚಾಲಿತ ಏಳು ದಿನಗಳ ನೋಟೀಸ್‌ನ್ನು ಹೊರಡಿಸತಕ್ಕದ್ದು ಅಥವಾ ಸರ್ಕಾರವು ಕಾಲ ಕಾಲಕ್ಕೆ ಅಧಿಸೂಚಿಸಿದಂತೆ. ನೋಟೀಸ್‌ನ್ನು ಗ್ರಾಮ ಪಂಚಾಯತಿಯ ನೋಟೀಸ್ ಬೋರ್ಡ್/ ಸಾರ್ವಜನಿಕ ಸ್ಥಳಗಳಲ್ಲಿ/ತಂತ್ರಾಂಶದಲ್ಲಿ ಪ್ರಚುರಪಡಿಸುವುದು. ಸ್ವೀಕರಿಸಿದ ಆಕ್ಷೇಪಣೆಗಳನ್ನು ಐದು ಕರ್ತವ್ಯದ ದಿನಗಳಲ್ಲಿ ನಿಯಮಾನುಸಾರ ವಿಲೇ ಮಾಡಿ ಪೂರ್ಣ ದಾಖಲೆಗಳ ಪರಿಶೀಲನೆಯೊಂದಿಗೆ ಸ್ಥಳ ಪರಿಶೀಲನೆಯನ್ನು ಕೈಗೊಂಡು ತಂತ್ರಾಂಶದಲ್ಲಿನ ಮಾಹಿತಿಯನ್ನು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಸಲ್ಲಿಸುವುದು, ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ನಾಲ್ಕು ಕರ್ತವ್ಯದ ದಿನಗಳಲ್ಲಿ ಪರಿಶೀಲಿಸಲಾದ ದಾಖಲೆ ಹಾಗೂ ಮಾಹಿತಿಯನ್ನು ಸೂಕ್ತ ಷರಾದೊಂದಿಗೆ ಕಾರ್ಯನಿರ್ವಾಹಕ ಅಧಿಕಾರಿಗೆ ತಂತ್ರಾಂಶದ ಮೂಲಕ ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು." ಒಂದು ವೇಳೆ ನಿಗದಿತ ಅವಧಿಯೊಳಗೆ ಮುಂದಿನ ಹಂತಕ್ಕೆ ಸಲ್ಲಿಸದಿದ್ದಲ್ಲಿ ಸ್ವಯಂಚಾಲಿತವಾಗಿ ಪರಿಶೀಲನೆಯಾಗಿದೆಯೆಂದು ಭಾವಿಸಿ ಮುಂದಿನ ಹಂತಕ್ಕೆ ತಂತ್ರಾಂಶದಲ್ಲಿ ವರ್ಗಾವಣೆಯಾಗತಕ್ಕದ್ದು:

ಪರಂತು, ಗ್ರೇಡ್-I / ಗ್ರೇಡ್-II ಕಾರ್ಯದರ್ಶಿ ಅಥವಾ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಕಡ್ಡಾಯವಾಗಿ ದಾಖಲೆಗಳನ್ನು ಹಾಗೂ ಸ್ಥಳ ಪರಿಶೀಲನೆ ಕೈಗೊಂಡ ನಂತರವೇ ಸ್ವಯಂಚಾಲಿತವಾಗಿ ಮುಂದಿನ ಹಂತಕ್ಕೆ ತಂತ್ರಾಂಶದಲ್ಲಿ ವರ್ಗಾವಣೆಯಾಗತಕ್ಕದ್ದು."

(ii) ಖಂಡ (ii) ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಎಂದರೆ. –

"(ii) ಖಂಡ (i) ರಡಿಯಲ್ಲಿ ಅರ್ಜಿಯನ್ನು ತಂತ್ರಾಂಶದಲ್ಲಿ ಸ್ವೀಕರಿಸಿದ ನಂತರ ನಾಲ್ಕು ಕಾರ್ಯನಿರ್ವಹಣಾ ದಿನಗಳಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯು ಅಧಿನಿಯಮ ಮತ್ತು ಅವುಗಳ ನಿಯಮಗಳ ಅಡಿಯಲ್ಲಿ ಪರಿಶೀಲಿಸತಕ್ಕದ್ದು ಹಾಗೂ ಷರಾದೊಂದಿಗೆ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಹಿಂತಿರುಗಿಸತಕ್ಕದ್ದು. ಒಂದು ವೇಳೆ ಅಧಿನಿಯಮ ಮತ್ತು ನಿಯಮಗಳ ಅಡಿಯಲ್ಲಿ ಉಲ್ಲಂಘನೆ ಕಂಡು ಬಂದಲ್ಲಿ, ಅದನ್ನು ಸರಿಪಡಿಸಲು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಹಿಂತಿರುಗಿಸತಕ್ಕದ್ದು. ನಿಗದಿತ ಅವಧಿಯಲ್ಲಿ ಹಿಂತಿರುಗಿಸದಿದ್ದಲ್ಲಿ ಸ್ವಯಂ-ಚಾಲಿತವಾಗಿ

ಪರಿಶೀಲಿಸಲಾಗಿದೆಯೆಂದು (Deemed Verified) ಭಾವಿಸತಕ್ಕದ್ದು. ನಮೂನೆ-11ಎ ಯನ್ನು ಹಿರಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಡಿಜಿಟಲ್ ಸಹಿಯೊಂದಿಗೆ ಎರಡು ದಿನಗಳೊಳಗೆ ಅನುಮೋದಿಸತಕ್ಕದ್ದು. ತಪ್ಪಿದ್ದಲ್ಲಿ ಸ್ವಯಂ-ಚಾಲಿತವಾಗಿ ಅನುಮೋದನೆಯಾಗಿದೆಯೆಂದು (Deemed Approved) ಭಾವಿಸತಕ್ಕದ್ದು. ಅರ್ಜಿದಾರನು ತಂತ್ರಾಂಶದ ಮೂಲಕ ನಿಯಮಾನುಸಾರ ಪ್ರತಿಗಳನ್ನು ಪಡೆಯಬಹುದು. 11ಎ ರಿಜಿಸ್ಟರ್‌ಗೆ ಆಸ್ತಿಯ ವಿವರಗಳನ್ನು ಸೇರಿಸುವುದಕ್ಕೆ ಮುಂಚಿತವಾಗಿ ಅನುಬಂಧ–1 ರಲ್ಲಿ ನಿಗಧಿಪಡಿಸಿರುವ ದಾಖಲೆಗಳನ್ನು ಕಡ್ಡಾಯವಾಗಿ ಪಡೆದು, ಪರಿಶೀಲಿಸಿ ನಂತರ ತಂತ್ರಾಂಶದಲ್ಲಿ ಒಟ್ಟಾರೆಯಾಗಿ 22 ದಿನಗಳೊಳಗೆ ಅಥವಾ ಸರ್ಕಾರವು ಕಾಲ ಕಾಲಕ್ಕೆ ಅಧಿಸೂಚಿಸಿದಂತೆ ದಾಖಲಿಸತಕ್ಕದ್ದು."

(iii) ಖಂಡ (iii) ರಲ್ಲಿ ನಮೂನೆ–11ಎ ರಿಜಿಸ್ಟರ್‌ಗೆ ಹೊಸ ಆಸ್ತಿಯ ವಿವರಗಳ ಸೇರ್ಪಡೆಯನ್ನು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಎಂಬ ಪದಗಳ ನಂತರದ "ಅಥವಾ ಗ್ರಾಮ ಪಂಚಾಯತಿ ಅಧ್ಯಕ್ಷರು ಸಕಾರಣವಿಲ್ಲದೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(iV) ಖಂಡ (iii) ರಲ್ಲಿ "ನಿಯಮ 15(ಇ)" ಎಂಬ ಪದ, ಅಂಕಿ, ಮತ್ತು ಅಕ್ಷರಗಳ ಬದಲಾಗಿ "ನಿಯಮ 15(1) (ಇ)" ಎಂಬ ಪದ ಅಂಕಿ ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

**4. ನಿಯಮ 6ರ ತಿದ್ದುಪಡಿ.-** ಸದರಿ ನಿಯಮಗಳ, ನಿಯಮ 6ರ, ಉಪನಿಯಮ (2)ರ,- "ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 ರ ಉಪಬಂಧಗಳ ಮೇರೆಗೆ ರಚಿಸಲಾದ ಸ್ಥಳೀಯ ಯೋಜನಾ ಪ್ರದೇಶದ ಅಧಿಕಾರದ ವ್ಯಾಪ್ತಿಯಡಿ ಬರುವ ಗ್ರಾಮ ಪಂಚಾಯತಿಗಳಲ್ಲಿ ಅನುಮೋದಿತ ಲೇಔಟ್ ಪ್ಲಾನನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961ರ 17ನೇ ಪ್ರಕರಣದಡಿ ಅಧಿಕಾರ ವ್ಯಾಪ್ತಿಯ ಯೋಜನಾ ಪ್ರಾಧಿಕಾರದಿಂದ ಅನುಮೋದಿತ ವಿನ್ಯಾಸ, ಆದೇಶದ ಪ್ರತಿ ಹಾಗೂ ನಿವೇಶನ ಬಿಡುಗಡೆ" ಎಂಬ ಪದಗಳ ಮತ್ತು ಅಂಕಿಗಳ ನಂತರ "ಆದೇಶಗಳನ್ನು ಪಡೆದು ನಿಯಮ 5(2) ರ ಅನ್ವಯ ಮಾಲೀಕರ ಹೆಸರಿಗೆ ನಮೂನೆಗಳನ್ನು ನೀಡತಕ್ಕದ್ದು." ಎಂಬ ಪದಗಳು, ಅಂಕಿಗಳು ಮತ್ತು ಆವರಣಗಳನ್ನು ಸೇರಿಸತಕ್ಕದ್ದು.

**5. ನಿಯಮ 8ರ ತಿದ್ದುಪಡಿ.-** ಸದರಿ ನಿಯಮಗಳ,

i) ಉಪ ನಿಯಮ (2) (ಆ) ರಲ್ಲಿ 15 ದಿನದೊಳಗೆ ಸೃಜಿಸತಕ್ಕದ್ದು ಬದಲಾಗಿ 22 ಕೆಲಸದ ದಿನದೊಳಗೆ ಸೃಜಿಸತಕ್ಕದ್ದು ಎಂದು ಪ್ರತ್ಯಾಯೋಜಿಸತಕ್ಕದ್ದು.

ii) (ಆ) ಉಪಖಂಡ (ii) ರ ನಂತರ ಈ ಕೆಳಕಂಡ ಪರಂತುಕವನ್ನು ಸೇರಿಸತಕ್ಕದ್ದು;

"ಪರಂತು, ಅಂತಹ ನೊಂದಾಯಿತ ಪ್ರಮಾಣ ಪತ್ರದಲ್ಲಿ ನಮೂದಿಸಲಾದ ನಿವೇಶನದ ಅಳತೆಯು ಗುಂಟೆಗಳಲ್ಲಿದ್ದರೂ ಅಥವಾ ಸೆಂಟ್‌ಗಳಲ್ಲಿದ್ದರೂ ಅಥವಾ ಇನ್ಯಾವುದೇ ಅಳತೆಯ ಮಾಪನದಲ್ಲಿದ್ದರೂ ಒಟ್ಟಾರೆಯಾಗಿ 1000 ಚ.ಮೀ. (<u>10,763.9 ಚ. ಅಡಿ / 9.8842 ಗುಂಟೆ/24.71 ಸೆಂಟ್ಸ್</u>) ಮೀರತಕ್ಕದ್ದಲ್ಲ."

(iii) ಆ ಉಪಖಂಡ (V) ರ ತರುವಾಯ ಈ ಕೆಳಕಂಡಂತೆ ಸೇರಿಸತಕ್ಕದ್ದು, ಎಂದರೆ: -

"**(VI) ಕೃಷಿ ಭೂಮಿಯಲ್ಲಿ ವಾಸ / ಕೃಷಿ ಉದ್ದೇಶಕ್ಕೆ ಮೂಲ ಮಾಲೀಕರು ಕಟ್ಟಿಸಿರುವ ಕಟ್ಟಡಗಳು** ಎಂದರೆ, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೃಷಿ ಜಮೀನಿನಲ್ಲಿ ವ್ಯವಸಾಯಗಾರನ ನಿವಾಸಕ್ಕಾಗಿ ಅಥವಾ ವ್ಯವಸಾಯದ ಸಲಕರಣೆಗಳನ್ನು ಇಡುವ ಉದ್ದೇಶಕ್ಕಾಗಿ ಬಳಕೆಯಾದ ವ್ಯವಸಾಯ ಭೂಮಿಯ ಭಾಗದಲ್ಲಿ ವ್ಯವಸಾಯ ಕ್ಷೇತ್ರಕ್ಕೆ ಲಗತ್ತಾದ ಕಟ್ಟಡ ಎಂದು ವರ್ಗೀಕೃತವಾಗಿರತಕ್ಕದ್ದು ಹಾಗೂ ಅನುಬಂಧ-2 ರ ಕ್ರಮ ಸಂಖ್ಯೆ: 6 ರಲ್ಲಿ

ನಿಗದಿಪಡಿಸಿರುವ ದಾಖಲಾತಿಗಳನ್ನು ಪಡೆದು ಕಟ್ಟಡ ನಿರ್ಮಿತ ವಿಸ್ತೀರ್ಣಕ್ಕೆ ನಮೂನೆ -11ಬಿ ನೀಡತಕ್ಕದ್ದು.

(**VII) ವಸತಿ ಯೋಜನೆ ಅಡಿ ಕೃಷಿ ಭೂಮಿಯಲ್ಲಿ ಸೃಜನೆಯಾಗಿರುವ ಕಟ್ಟಡಗಳು**; ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೃಷಿ ಭೂಮಿಯಲ್ಲಿ ಕೇಂದ್ರ / ರಾಜ್ಯ ಸರ್ಕಾರದ ವಸತಿ ಯೋಜನೆ ಅಡಿಯಲ್ಲಿ ಸೃಜನೆಯಾಗಿರುವ ಕಟ್ಟಡಗಳಿಗೆ ಸಂಬಂದಿಸಿದಂತೆ ನಮೂನೆಯನ್ನು ಜಮೀನಿನ ಮಾಲೀಕರ ಹೆಸರಿಗೆ ಸೃಜಿಸುವುದು ಹಾಗೂ ಸದರಿ ನಮೂನೆಯ ಅಧಿಬೋಗದಾರರ ಕಾಲಂನಲ್ಲಿ ವಸತಿ ಯೋಜನೆಯ ಫಲಾನುಭವಿ ಹೆಸರನ್ನು ನಮೂದಿಸುವುದು. ಪರಭಾರೆಗೆ ಅವಕಾಶ ಇರದ ಬಗ್ಗೆ ಹಕ್ಕುಗಳು ಮತ್ತು ಹೊಣೆಗಾರಿಕೆಗಳಲ್ಲಿ ನಮೂದಿಸುವುದು.

**(VIII) ಅರಣ್ಯ ಹಕ್ಕು ಕಾಯ್ದೆ 2006 ರಲ್ಲಿ ಮಂಜೂರಾದ ಆಸ್ತಿ;** ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅರಣ್ಯ ಭೂಮಿಯಲ್ಲಿ ನೆಲೆಗೊಂಡಿರುವ ನಿವಾಸಿಗಳಿಗೆ ನೀಡಲಾದ ಹಕ್ಕು ಪತ್ರಗಳ ಸ್ವತ್ತು **ಅರಣ್ಯ ಹಕ್ಕು ಕಾಯ್ದೆ 2006 ರ ಪ್ರಕರಣ 4** ರಡಿಯಲ್ಲಿ / ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕು ಮಾನ್ಯತೆ) ನಿಯಮಗಳು 2008ರ 8(ಹೆಚ್) ರಡಿಯಲ್ಲಿ ಮಂಜೂರಾದ ಆಸ್ತಿ ಎಂದು ವರ್ಗೀಕೃತವಾಗಿರತಕ್ಕದ್ದು. ಯಾವುದೇ ರೀತಿಯ ಪರಭಾರೆಗೆ ಅವಕಾಶ ಇಲ್ಲದ ಬಗ್ಗೆ ಹಕ್ಕುಗಳು ಮತ್ತು ಹೊಣೆಗಾರಿಕೆಗಳಲ್ಲಿ ನಮೂದಿಸುವುದು. ಸದರಿ ಆಸ್ತಿಯ ಹಕ್ಕು ಅನುವಂಶೀಯವಾಗಿರತಕ್ಕದ್ದು."

(ii) ಖಂಡ (ಆ) ರ ತರುವಾಯ ಈ ಕೆಳಕಂಡಂತೆ ಸೇರಿಸತಕ್ಕದ್ದು, ಎಂದರೆ; -

"(ಆ-1) (i) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2025 ರ ದಿನಾಂಕ: 07.04.2025 ಕ್ಕೆ ಮುಂಚಿತವಾಗಿ ಸೃಜನೆಯಾಗಿರುವ ಕಟ್ಟಡ ಮತ್ತು ನಿವೇಶನಗಳು, ಗ್ರಾಮ ಪಂಚಾಯತಿಯು ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕೈಬಿಡಲಾಗಿದೆ ಎಂದು ಬಾಧಿತರಾದ ವ್ಯಕ್ತಿಗಳು/ ಸಂಸ್ಥೆಗಳು ಅನುಬಂಧ -2 ರಲ್ಲಿನ ದಾಖಲೆಗಳ ಅನ್ವಯ ನಮೂನೆ -11ಬಿ ಗೆ ಇ-ಸ್ವತ್ತು ತಂತ್ರಾಂಶದಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(ii) ತಂತ್ರಾಂಶದಲ್ಲಿ ಆರೋಹಿಸಲಾದ ಮಾಹಿತಿಯನ್ವಯ ಆಸ್ತಿಯನ್ನು ದಿನಾಂಕ: 07.04.2025 ರ ಪೂರ್ವದಲ್ಲಿ ಸೃಜನೆಯಾಗಿರುವ ಬಗ್ಗೆ ತಂತ್ರಾಂಶದ ಮೂಲಕ ದೃಢೀಕರಿಸಿಕೊಂಡ ನಂತರದಲ್ಲಿ ಮುಂದಿನ ಪ್ರಕ್ರಿಯೆಗಾಗಿ ಅರ್ಜಿಯು ತಂತ್ರಾಂಶದ ಮೂಲಕ ಗ್ರಾಮ ಪಂಚಾಯತಿ ಗ್ರೇಡ್ -I /ಗ್ರೇಡ್ -II ಕಾರ್ಯದರ್ಶಿಗೆ ವರ್ಗಾವಣೆಯಾಗತಕ್ಕದ್ದು. "

(iii) ಖಂಡ (ಇ) ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಎಂದರೆ, -

"(ಇ) ಗ್ರಾಮ ಪಂಚಾಯತಿ ಗ್ರೇಡ್-I / ಗ್ರೇಡ್-II ಕಾರ್ಯದರ್ಶಿಗಳ ಲಾಗಿನ್‌ನಲ್ಲಿ ಅರ್ಜಿ ಸ್ವೀಕರಿಸಿದ ನಂತರ ಸಾರ್ವಜನಿಕ ಆಕ್ಷೇಪಣೆಗಳನ್ನು ಆಹ್ವಾನಿಸಲು ತಂತ್ರಾಂಶದ ಮೂಲಕ ಸ್ವಯಂಚಾಲಿತ ಏಳು ದಿನಗಳ ನೋಟೀಸ್‌ನ್ನು ಹೊರಡಿಸತಕ್ಕದ್ದು ಅಥವಾ ಸರ್ಕಾರವು ಕಾಲ ಕಾಲಕ್ಕೆ ಅಧಿಸೂಚಿಸಿದಂತೆ . ನೋಟೀಸ್‌ನ್ನು ಗ್ರಾಮ ಪಂಚಾಯತಿಯ ನೋಟೀಸ್ ಬೋರ್ಡ್/ ಸಾರ್ವಜನಿಕ ಸ್ಥಳಗಳಲ್ಲಿ/ತಂತ್ರಾಂಶದಲ್ಲಿ ಪ್ರಚುರಪಡಿಸುವುದು. ಸ್ವೀಕರಿಸಿದ ಆಕ್ಷೇಪಣೆಗಳನ್ನು

ಐದು ಕರ್ತವ್ಯದ ದಿನಗಳಲ್ಲಿ ನಿಯಮಾನುಸಾರ ವಿಲೇ ಮಾಡಿ ಪೂರ್ಣ ದಾಖಲೆಗಳ ಪರಿಶೀಲನೆಯೊಂದಿಗೆ ಸ್ಥಳ ಪರಿಶೀಲನೆಯನ್ನು ಕೈಗೊಂಡು ತಂತ್ರಾಂಶದಲ್ಲಿನ ಮಾಹಿತಿಯನ್ನು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಸಲ್ಲಿಸುವುದು. ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ನಾಲ್ಕು ಕರ್ತವ್ಯದ ದಿನಗಳಲ್ಲಿ ಪರಿಶೀಲಿಸಲಾದ ದಾಖಲೆ ಹಾಗೂ ಮಾಹಿತಿಯನ್ನು ಸೂಕ್ತ ಷರಾದೊಂದಿಗೆ ಕಾರ್ಯನಿರ್ವಾಹಕ ಅಧಿಕಾರಿಗೆ ತಂತ್ರಾಂಶದ ಮೂಲಕ ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು." ಒಂದು ವೇಳೆ ನಿಗದಿತ ಅವಧಿಯೊಳಗೆ ಮುಂದಿನ ಹಂತಕ್ಕೆ ಸಲ್ಲಿಸದಿದ್ದಲ್ಲಿ ಸ್ವಯಂಚಾಲಿತವಾಗಿ ಪರಿಶೀಲನೆಯಾಗಿದೆಯೆಂದು ಭಾವಿಸಿ ತಂತ್ರಾಂಶದಲ್ಲಿ ಮುಂದಿನ ಹಂತಕ್ಕೆ ವರ್ಗಾವಣೆಯಾಗತಕ್ಕದ್ದು.

ಪರಂತು, ಗ್ರೇಡ್-I / ಗ್ರೇಡ್-II ಕಾರ್ಯದರ್ಶಿ ಅಥವಾ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಕಡ್ಡಾಯವಾಗಿ ದಾಖಲೆಗಳನ್ನು ಹಾಗೂ ಸ್ಥಳ ಪರಿಶೀಲನೆ ಕೈಗೊಂಡ ನಂತರವೇ ಸ್ವಯಂಚಾಲಿತವಾಗಿ ಮುಂದಿನ ಹಂತಕ್ಕೆ ತಂತ್ರಾಂಶದಲ್ಲಿ ವರ್ಗಾವಣೆಯಾಗತಕ್ಕದ್ದು."

(iv) ಖಂಡ (ಈ) ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಎಂದರೆ, -

"(ಈ) ಮೇಲಿನ ಖಂಡ (ಇ) ರಡಿಯ ಅರ್ಜಿಯನ್ನು ಸ್ವೀಕರಿಸಿದ ನಂತರ ನಾಲ್ಕು ಕಾರ್ಯನಿರ್ವಹಣಾ ದಿನಗಳಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯು ಕಾಯ್ದೆ ಅಥವಾ ನಿಯಮಗಳ ಅಡಿಯಲ್ಲಿ ಪರಿಶೀಲಿಸತಕ್ಕದ್ದು ಹಾಗೂ ಷರಾದೊಂದಿಗೆ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಹಿಂತಿರುಗಿಸತಕ್ಕದ್ದು. ಒಂದು ವೇಳೆ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಉಲ್ಲಂಘನೆ ಕಂಡು ಬಂದಲ್ಲಿ, ಅದನ್ನು ಸರಿಪಡಿಸಲು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಹಿಂತಿರುಗಿಸತಕ್ಕದ್ದು. ನಿಗದಿತ ಅವಧಿಯಲ್ಲಿ ಹಿಂತಿರುಗಿಸದಿದ್ದಲ್ಲಿ ಸ್ವಯಂ-ಚಾಲಿತವಾಗಿ ಪರಿಶೀಲಿಸಲಾಗಿದೆಯೆಂದು (Deemed Verified) ಭಾವಿಸತಕ್ಕದ್ದು. ನಮೂನೆ-11ಬಿ ಯನ್ನು ಹಿರಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿ ಡಿಜಿಟಲ್ ಸಹಿಯೊಂದಿಗೆ ಎರಡು ದಿನಗಳೊಳಗೆ ಅನುಮೋದಿಸತಕ್ಕದ್ದು. ತಪ್ಪಿದ್ದಲ್ಲಿ ಸ್ವಯಂ-ಚಾಲಿತವಾಗಿ ಅನುಮೋದನೆಯಾಗಿದೆಯೆಂದು (Deemed Approved) ಭಾವಿಸತಕ್ಕದ್ದು. ಅರ್ಜಿದಾರನು ತಂತ್ರಾಂಶದ ಮೂಲಕ ನಿಯಮಾನುಸಾರ ಪ್ರತಿಗಳನ್ನು ಪಡೆಯಬಹುದು. 11ಬಿ ರಿಜಿಸ್ಟರ್‌ಗೆ ಆಸ್ತಿಯ ವಿವರಗಳನ್ನು ಸೇರಿಸುವುದಕ್ಕೆ ಮುಂಚಿತವಾಗಿ ಅರ್ಜಿಯ ಆಸ್ತಿಯು ದಿನಾಂಕ: 07.04.2025 ರ ಪೂರ್ವದಲ್ಲಿ ಸೃಜಿಸಿರುವ ಬಗ್ಗೆ ತಂತ್ರಾಂಶದಿಂದ ದೃಢೀಕರಿಸಿಕೊಂಡ ನಂತರ ಅನುಬಂಧ–2 ರಲ್ಲಿ ನಿಗಧಿಪಡಿಸಿರುವ ದಾಖಲೆಗಳನ್ನು ಕಡ್ಡಾಯವಾಗಿ ಪಡೆದು, ಪರಿಶೀಲಿಸಿ ನಂತರ ತಂತ್ರಾಂಶದಲ್ಲಿ ಒಟ್ಟಾರೆಯಾಗಿ 22 ದಿನಗಳೊಳಗೆ ಅಥವಾ ಸರ್ಕಾರವು ಕಾಲ ಕಾಲಕ್ಕೆ ಅಧಿಸೂಚಿಸಿದಂತೆ ದಾಖಲಿಸತಕ್ಕದ್ದು."

(V) ಖಂಡ (ಉ) ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು:-

"(ಉ) ಗ್ರಾಮ ಪಂಚಾಯತಿ ತೆರಿಗೆ ವ್ಯಾಪ್ತಿಗೆ ಒಳಪಡುವ ಅರ್ಹ ನಮೂನೆ 11ಬಿ ಆಸ್ತಿಗಳು ಹಾಗೂ 07.04.2025ಕ್ಕಿಂತ ಮೊದಲು ಅಸ್ತಿತ್ವದಲ್ಲಿದ್ದು ನಮೂನೆ 11ಬಿ ಹೊಂದಿರದ ಆಸ್ತಿಗಳನ್ನು ಸರ್ಕಾರವು ಅಧಿಸೂಚಿಸಿದಂತೆ ನಮೂನೆ 11ಎ ಆಸ್ತಿಗಳಾಗಿ ಪರಿವರ್ತಿಸುವುದು."

**6. ನಿಯಮ 9ರ ತಿದ್ದುಪಡಿ.- ಸದರಿ ನಿಯಮಗಳ;**

(i) 11ರ ಖಂಡ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು;- ಎಂದರೆ

"(11), ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2025 ರ ಅಧಿಸೂಚಿತ ದಿನಾಂಕದ ನಂತರದಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 95(1) ರ ಅಡಿಯಲ್ಲಿ ನಿರ್ಮಿಸಿರುವ ಕಟ್ಟಡಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸುವಂತಿಲ್ಲ."

(ii) (12) ರ ಖಂಡ (ಅ) ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಎಂದರೆ, -

"(ಅ) ಅಧಿನಿಯಮದ ಪ್ರಕರಣ 199, 201 ರಡಿಯಲ್ಲಿ ಯಾವುದೇ ತೆರಿಗೆ, ದರ ಅಥವಾ ಶುಲ್ಕಗಳ ನಿರ್ಧರಣೆ, ವಸೂಲಿ ಅಥವಾ ವಿಧಿಸುವಿಕೆಯಿಂದ ಬಾಧಿತನಾದ ಯಾವುದೇ ವ್ಯಕ್ತಿಯು ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿ(ಅಭಿವೃದ್ಧಿ)ಗೆ ನಿಯಮ 15 ರಡಿಯಲ್ಲಿ ಮೇಲ್ಮನವಿ ಸಲ್ಲಿಸತಕ್ಕದ್ದು."

**7. ನಿಯಮ 11ರ ತಿದ್ದುಪಡಿ.-** ಸದರಿ ನಿಯಮಗಳ ನಿಯಮ 11ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಎಂದರೆ, -

"11. **ತೆರಿಗೆ ನಿರ್ಧರಣೆ, ಬೇಡಿಕೆ, ವಸೂಲಾತಿ ಮತ್ತು ಬಾಕಿ ವಹಿಯ ಉದ್ಧೃತ ಭಾಗ ನೀಡುವುದು: -**ತೆರಿಗೆ ನಿರ್ಧರಣೆ, ತೆರಿಗೆ ಬೇಡಿಕೆ, ವಸೂಲಾತಿ ಮತ್ತು ಬಾಕಿ ವಹಿಗಳಲ್ಲಿನ ವಿವರಗಳನ್ನು ಒಳಗೊಂಡ ನಮೂನೆ-11ಎ ಮತ್ತು ನಮೂನೆ-11ಬಿ ಯ ಉದ್ಧೃತ ಭಾಗವನ್ನು ಆಸ್ತಿಯ ಮಾಲೀಕ ಅಥವಾ ಅಂತಹ ಮಾಲೀಕನು ಅಧಿಕಾರ ನೀಡಿದ ವ್ಯಕ್ತಿಯು ನಿಗಧಿತ ಶುಲ್ಕ ಹಾಗೂ ಬಾಕಿ ತೆರಿಗೆಯನ್ನು ಪಾವತಿಸಿ ತಂತ್ರಾಂಶದ ಮೂಲಕ ಪಡೆಯತಕ್ಕದ್ದು."

**8. ನಿಯಮ 12ರ ತಿದ್ದುಪಡಿ.-** ಸದರಿ ನಿಯಮಗಳ,-

(i) ಉಪನಿಯಮ (4) ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಎಂದರೆ; -

"(4) ಗ್ರಾಮ ಪಂಚಾಯತಿ ಗ್ರೇಡ್-I / ಗ್ರೇಡ್-II ಕಾರ್ಯದರ್ಶಿಗಳ ಲಾಗಿನ್‌ನಲ್ಲಿ ಅರ್ಜಿ ಸ್ವೀಕರಿಸಿದ ನಂತರ ಸಾರ್ವಜನಿಕ ಆಕ್ಷೇಪಣೆಗಳನ್ನು ಆಹ್ವಾನಿಸಲು ತಂತ್ರಾಂಶದ ಮೂಲಕ ಸ್ವಯಂಚಾಲಿತ ಏಳು ದಿನಗಳ ನೋಟೀಸ್‌ನ್ನು ಹೊರಡಿಸತಕ್ಕದ್ದು ಅಥಾವ ಸರ್ಕಾರವು ಕಾಲ ಕಾಲಕ್ಕೆ ಅಧಿಸೂಚಿಸಿದಂತೆ . ನೋಟೀಸ್‌ನ್ನು ಗ್ರಾಮ ಪಂಚಾಯತಿಯ ನೋಟೀಸ್ ಬೋರ್ಡ್/ ಸಾರ್ವಜನಿಕ ಸ್ಥಳಗಳಲ್ಲಿ/ತಂತ್ರಾಂಶದಲ್ಲಿ ಪ್ರಚುರ ಪಡಿಸುವುದು. ಸ್ವೀಕರಿಸಿದ ಆಕ್ಷೇಪಣೆಗಳನ್ನು ಐದು ಕರ್ತವ್ಯದ ದಿನಗಳಲ್ಲಿ ನಿಯಮಾನುಸಾರ ವಿಲೇ ಮಾಡಿ ಪೂರ್ಣ ದಾಖಲೆಗಳ ಪರಿಶೀಲನೆಯೊಂದಿಗೆ ಸ್ಥಳ ಪರಿಶೀಲನೆಯನ್ನು ಕೈಗೊಂಡು ತಂತ್ರಾಂಶದಲ್ಲಿನ ಮಾಹಿತಿಯನ್ನು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಸಲ್ಲಿಸುವುದು.

ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ನಾಲ್ಕು ಕರ್ತವ್ಯದ ದಿನಗಳಲ್ಲಿ ಪರಿಶೀಲಿಸಲಾದ ದಾಖಲೆ ಹಾಗೂ ಮಾಹಿತಿಯನ್ನು ಸೂಕ್ತ ಷರಾದೊಂದಿಗೆ ಕಾರ್ಯನಿರ್ವಾಹಕ ಅಧಿಕಾರಿಗೆ ತಂತ್ರಾಂಶದ ಮೂಲಕ ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು. ಒಂದು ವೇಳೆ ನಿಗದಿತ ಅವಧಿಯೊಳಗೆ ಮುಂದಿನ ಹಂತಕ್ಕೆ ಸಲ್ಲಿಸದಿದ್ದಲ್ಲಿ ಸ್ವಯಂಚಾಲಿತವಾಗಿ ಪರಿಶೀಲನೆಯಾಗಿದೆಯೆಂದು ಭಾವಿಸಿ ಮುಂದಿನ ಹಂತಕ್ಕೆ ತಂತ್ರಾಂಶದಲ್ಲಿ ವರ್ಗಾವಣೆಯಾಗತಕ್ಕದ್ದು:

ಪರಂತು, ಗ್ರೇಡ್-I / ಗ್ರೇಡ್-II ಕಾರ್ಯದರ್ಶಿ ಅಥವಾ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಕಡ್ಡಾಯವಾಗಿ ದಾಖಲೆಗಳನ್ನು ಹಾಗೂ ಸ್ಥಳ ಪರಿಶೀಲನೆ ಕೈಗೊಂಡ ನಂತರವೇ ಸ್ವಯಂಚಾಲಿತವಾಗಿ ಮುಂದಿನ ಹಂತಕ್ಕೆ ತಂತ್ರಾಂಶದಲ್ಲಿ ವರ್ಗಾವಣೆಯಾಗತಕ್ಕದ್ದು."

(ii) ಉಪನಿಯಮ (5) ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಎಂದರೆ; -

**"(5) ಮೇಲಿನ ಉಪ ನಿಯಮ (4) ರಡಿಯ ತೀರ್ಮಾನವನ್ನು ಅರ್ಜಿಯನ್ನು ತಂತ್ರಾಂಶದಲ್ಲಿ ಸ್ವೀಕರಿಸಿದ ನಂತರ ನಾಲ್ಕು ಕಾರ್ಯ ನಿರ್ವಹಣಾ ದಿನಗಳಲ್ಲಿ ಕಾರ್ಯ ನಿರ್ವಾಹಕ ಅಧಿಕಾರಿಯು ಕಾಯ್ದೆ ಅಥವಾ ನಿಯಮಗಳ ಅಡಿಯಲ್ಲಿ ಪರಿಶೀಲಿಸತಕ್ಕದ್ದು ಹಾಗೂ ಷರಾದೊಂದಿಗೆ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಹಿಂತಿರುಗಿಸತಕ್ಕದ್ದು. ಒಂದು ವೇಳೆ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಉಲ್ಲಂಘನೆ ಕಂಡುಬಂದಲ್ಲಿ, ಅದನ್ನು ಸರಿಪಡಿಸಲು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಹಿಂತಿರುಗಿಸತಕ್ಕದ್ದು. ನಿಗದಿತ ಅವಧಿಯಲ್ಲಿ ಹಿಂತಿರುಗಿಸದಿದ್ದಲ್ಲಿ ಸ್ವಯಂ-ಚಾಲಿತವಾಗಿ ಪರಿಶೀಲಿಸಲಾಗಿದೆಯೆಂದು (Deemed Verified) ಭಾವಿಸತಕ್ಕದ್ದು. ನಮೂನೆ ಯನ್ನು ಹಿರಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಡಿಜಿಟಲ್ ಸಹಿಯೊಂದಿಗೆ ಎರಡು ದಿನಗಳೊಳಗೆ ಅನುಮೋದಿಸತಕ್ಕದ್ದು. ತಪ್ಪಿದ್ದಲ್ಲಿ ಸ್ವಯಂ-ಚಾಲಿತವಾಗಿ ಅನುಮೋದನೆಯಾಗಿದೆಯೆಂದು (Deemed Approved) ಭಾವಿಸತಕ್ಕದ್ದು."**

(iii) ಉಪನಿಯಮ (6) ರ ಖಂಡ (ಅ) ರಲ್ಲಿ "ಹದಿನೈದು ದಿನಗಳೊಳಗೆ" ಎಂಬ ಪದಗಳ ಬದಲಾಗಿ 'ಏಳು ದಿನಗಳ ನೋಟೀಸ್ ಒಳಗೊಂಡಂತೆ ಹತ್ತು ದಿನಗಳೊಳಗೆ' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iV) ಉಪನಿಯಮ (7) ರ ನಂತರ ಈ ಕೆಳಕಂಡಂತೆ ಸೇರಿಸಿಕೊಳ್ಳತಕ್ಕದ್ದು ಎಂದರೆ; -

"(8) (i) ಇ-ಸ್ವತ್ತು ತಂತ್ರಾಂಶದ ಮೂಲಕ ಸೃಜಿಸಲಾದ ನಮೂನೆಗಳಲ್ಲಿನ ತಿದ್ದುಪಡಿಗಳನ್ನು ಸೂಕ್ತ ದಾಖಲೆ ಹಾಗೂ ಷರಾದೊಂದಿಗೆ ತಂತ್ರಾಂಶದ ಮೂಲಕ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗೆ / ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿ (ಅಭಿವೃದ್ಧಿ) ಸರ್ಕಾರವು ಕಾಲ ಕಾಲಕ್ಕೆ ಅಧಿಸೂಚಿಸಿದಂತೆ ಸಲ್ಲಿಸತಕ್ಕದ್ದು.

(ii) ಇ ಸ್ವತ್ತು ತಂತ್ರಾಂಶದ ಮೂಲಕ ಸ್ವೀಕರಿಸಲಾದ ತಿದ್ದುಪಡಿ ಪ್ರಸ್ತಾವನೆಯನ್ನು ಹಾಗೂ ದಾಖಲೆಗಳನ್ನು ಪರಿಶೀಲಿಸಿ ಕಾರ್ಯನಿರ್ವಾಹಕ ಅಧಿಕಾರಿಯು/ ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿ (ಅಭಿವೃದ್ಧಿ) ಸರ್ಕಾರವು ಕಾಲ ಕಾಲಕ್ಕೆ ಅಧಿಸೂಚಿಸಿದಂತೆ ತಂತ್ರಾಂಶದ ಮೂಲಕ

ನಾಲ್ಕು ಕರ್ತವ್ಯದ ದಿನದೊಳಗೆ ಅನುಮೋದನೆಯೊಂದಿಗೆ ತಿದ್ದುಪಡಿಗಾಗಿ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಹಿಂತಿರುಗಿಸತಕ್ಕದ್ದು. ತಪ್ಪಿದಲ್ಲಿ ಸ್ವಯಂ ಚಾಲಿತ ಅನುಮೋದನೆಯೊಂದಿಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ವರ್ಗಾವಣೆಯಾಗತಕ್ಕದ್ದು.

(9) (i) ಇ-ಸ್ವತ್ತು ತಂತ್ರಾಂಶದ ಮೂಲಕ ಸೃಜಿಸಲಾದ ನಮೂನೆಗಳನ್ನು ರದ್ದುಪಡಿಸುವ (Invalidation) ಸಂದರ್ಭದಲ್ಲಿ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ / ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ತಂತ್ರಾಂಶದ ಮೂಲಕ ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿ (ಅಭಿವೃದ್ಧಿ)/ ಉಪ ಕಾರ್ಯದರ್ಶಿಗೆ ಸಲ್ಲಿಸತಕ್ಕದ್ದು.

(ii) ಉಪ ಕಾರ್ಯದರ್ಶಿ (ಅಭಿವೃದ್ಧಿ)/ ಉಪ ಕಾರ್ಯದರ್ಶಿಯು ತಂತ್ರಾಂಶದ ಮೂಲಕ ಸ್ವೀಕರಿಸಲಾದ ಪ್ರಸ್ತಾವನೆ ಹಾಗೂ ದಾಖಲೆಗಳನ್ನು ಅಧಿನಿಯಮ ಅಥವಾ ಅದರಡಿಯಲ್ಲಿ ರಚಿತವಾದ ನಿಯಮಗಳಡಿ ಪರಿಶೀಲಿಸಿ, ಸೂಕ್ತ ವಿಚಾರಣೆ ನಡೆಸಿ, ಅವಶ್ಯವಿದ್ದಲ್ಲಿ ಸ್ಥಳ ಪರಿಶೀಲನೆ ಮಾಡಿ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿತವಾದ ನಿಯಮಗಳಡಿಯಲ್ಲಿ ಉಲ್ಲಂಘನೆ ಕಂಡು ಬಂದಲ್ಲಿ ನಮೂನೆಯನ್ನು ರದ್ದುಪಡಿಸುವ ಪ್ರಸ್ತಾವನೆಯನ್ನು ಸೂಕ್ತ ಆದೇಶದ ಮೂಲಕ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ / ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ತಂತ್ರಾಂಶದ ಮೂಲಕ ವರ್ಗಾವಣೆ ಆಗತಕ್ಕದ್ದು."

**9. ನಿಯಮ 15ರ ತಿದ್ದುಪಡಿ.-** ಸದರಿ ನಿಯಮಗಳ ನಿಯಮ 15ರ ,-

(i) ನಿಯಮ 10ರ ಖಂಡ (ಅ:) ನ್ನು ಹೊರತುಪಡಿಸಿ ಉಪನಿಯಮ (1) ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಎಂದರೆ;

"ಈ ನಿಯಮಗಳ ಅಡಿಯಲ್ಲಿ ಕೈಗೊಂಡ ಯಾವುದೇ ನಿರ್ಣಯ/ಆದೇಶ/ತೀರ್ಮಾನ/ಕ್ರಮದಿಂದ ಬಾಧಿತನಾದ ಯಾವುದೇ ವ್ಯಕ್ತಿಯು ಸೂಕ್ತ ಪರಿಹಾರ ಕಂಡುಕೊಳ್ಳಲು ದೂರು ಅಥವಾ ಆಪೀಲುನ್ನು ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿ (ಅಭಿವೃದ್ಧಿ) ಗೆ ಮೇಲ್ಮನವಿ ಸಲ್ಲಿಸತಕ್ಕದ್ದು"

(ii) ಉಪನಿಯಮ (2) ಅನ್ನು ಬಿಟ್ಟುಬಿಡತಕ್ಕದ್ದು.

**10. ನಿಯಮ 16ರ ತಿದ್ದುಪಡಿ, -** ಸದರಿ ನಿಯಮಗಳ, ನಿಯಮ 16ರ,-

(i) ಉಪನಿಯಮ (1) ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು, ಎಂದರೆ; -

"(1) ಗ್ರಾಮ ಪಂಚಾಯತಿಯ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಮತ್ತು ಗ್ರಾಮ ಪಂಚಾಯತಿ ಗ್ರೇಡ್-I/ ಗ್ರೇಡ್-II ಕಾರ್ಯದರ್ಶಿಯು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961ರ ಉಪ ಬಂಧಗಳನ್ನು ಉಲ್ಲಂಘಿಸಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2025 ಅಧಿಸೂಚನೆಯಾದ ದಿನಾಂಕದ ನಂತರ ಹೊಸ PID ಅಥವಾ ಖಾತಾವನ್ನು ಕಾನೂನು ಬಾಹಿರವಾಗಿ ನೀಡಿದಲ್ಲಿ ದಂಡನೆಗೆ ಒಳಗಾಗುತ್ತಾರೆ."

(ii) ಉಪನಿಯಮ (2) ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು, ಎಂದರೆ;

**"(2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಹಾಗೂ ಗ್ರಾಮ ಪಂಚಾಯತಿ ಗ್ರೇಡ್-I/ ಗ್ರೇಡ್-II ಕಾರ್ಯದರ್ಶಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿ ವಿಚಾರಣೆ**

**ಮಾಡಿ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಹಾಗೂ ಗ್ರಾಮ ಪಂಚಾಯತಿ ಗ್ರೇಡ್-I/ ಗ್ರೇಡ್-II ಕಾರ್ಯದರ್ಶಿಗೆ ದಂಡನೆಯನ್ನು ವಿಧಿಸುವ ಬಗ್ಗೆ ಪಂಚಾಯತ್ ರಾಜ್ ಆಯುಕ್ತರಿಗೆ ಶಿಫಾರಸ್ಸು ಮಾಡುವುದು.**

(iii) ಉಪನಿಯಮ (3) ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು, ಎಂದರೆ; -

"(3) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961ರ ಉಪಬಂಧಗಳ ಪ್ರಕಾರ ಕಡ್ಡಾಯವಾಗಿ ಸಾರ್ವಜನಿಕ ಬಳಕೆಗೆಗಾಗಿ ಮೀಸಲಿರಿಸಿ ಸಂಬಂಧಿಸಿದ ಪ್ರಾಧಿಕಾರಕ್ಕೆ ಪರಿತ್ಯಾಜನಾ ಪತ್ರದ ಪ್ರಕಾರ ನೀಡಬೇಕಾದ ಆಸ್ತಿಯ ವಿಸ್ತೀರ್ಣದ ಮಾರ್ಗಸೂಚಿ ದರದ ಎರಡು ಪಟ್ಟನ್ನು ವಿಧಿಸತಕ್ಕದ್ದು. ಇತರೆ ಪ್ರಕರಣದಲ್ಲಿ ನಿವೇಶನ ವಿಸ್ತೀರ್ಣದ ಮಾರ್ಗಸೂಚಿ ದರದ ಎರಡು ಪಟ್ಟನ್ನು ವಿಧಿಸತಕ್ಕದ್ದು ಹಾಗೂ ಅಧಿನಿಯಮದ ಅಡಿಯಲ್ಲಿ ಮತ್ತು ಸೇವಾ ನಿಯಮದಡಿಯಲ್ಲಿ ಇರುವಂತಹ ದಂಡನೆಗೂ ಒಳಪಡಿಸಬಹುದು."

(iV) ಉಪನಿಯಮ (5) ರ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು, ಎಂದರೆ; -

"(5) ನಿಯಮ 5(2), 6(4), 8(ಈ) ರಲ್ಲಿ ಗ್ರಾಮ ಪಂಚಾಯತಿಯ ಗ್ರೇಡ್-I/ ಗ್ರೇಡ್-II ಕಾರ್ಯದರ್ಶಿ/ ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯ ಕರ್ತವ್ಯ ಲೋಪದಿಂದ ಸ್ವಯಂ ಚಾಲಿತವಾಗಿ ಅನುಮೋದನೆ ಆದಂತಹ ಪ್ರಕರಣಗಳಲ್ಲಿ ಸಂಬಂಧಿಸಿದ ಅಧಿಕಾರಿಗಳ ಮೇಲೆ ಸೇವಾ ನಿಯಮಗಳಡಿಯಲ್ಲಿ ಕರ್ತವ್ಯ ಲೋಪಕ್ಕಾಗಿ ಶಿಸ್ತು ಕ್ರಮ ವಹಿಸಬಹುದು. ಸ್ವಯಂ ಚಾಲಿತ ಅನುಮೋದನೆ (Deemed Approval) ಆದ ಪ್ರಮಾಣ ಪತ್ರವು ಕಾನೂನು ಬಾಹಿರವೆಂದು ತಿಳಿದು ಬಂದಲ್ಲಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ, ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹಾಗೂ ಗ್ರಾಮ ಪಂಚಾಯತಿ ಗ್ರೇಡ್-I/ ಗ್ರೇಡ್-II ಕಾರ್ಯದರ್ಶಿಯನ್ನೇ ನೇರ ಜವಾಬ್ದಾರರನ್ನಾಗಿ ಮಾಡಿ ಅವರ ವಿರುದ್ಧ ನಿಯಮ 16(3) ರನ್ವಯ ಇರುವಂತಹ ದಂಡನೆಗೆ ಒಳಪಡಿಸತಕ್ಕದ್ದು ಮತ್ತು ಅಂತಹ ಪ್ರಮಾಣ ಪತ್ರಗಳನ್ನು ರದ್ದುಗೊಳಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ನಿಯಮ 15 ರನ್ವಯ ಕ್ರಮ ವಹಿಸತಕ್ಕದ್ದು."

**11. ನಿಯಮ 18ರ ತಿದ್ದುಪಡಿ.-** ಸದರಿ ನಿಯಮಗಳ, ನಿಯಮ 18 ರ,-

(i) ಖಂಡ (ಇ) ರ ಬದಲಾಗಿ ಕೆಳಕಂಡಂತೆ ಪ್ರತಿನಿಯೋಜಿಸತಕ್ಕದ್ದು ಅಂದರೆ;-

"**(ಇ) (i) ವಾಣಿಜ್ಯ, ವಸತಿಯೇತರ ವ್ಯವಹಾರ ಲೈಸೆನ್ಸ್ ಶುಲ್ಕ,-** ಅಧಿನಿಯಮದ ಪ್ರಕರಣ 67, 68, 69 ಮತ್ತು 70 ರಡಿಯಲ್ಲಿ ಗ್ರಾಮ ಪಂಚಾಯತಿಯ ವ್ಯಾಪ್ತಿಯೊಳಗೆ ವ್ಯಾಪಾರಕ್ಕಾಗಿ ಅಥವಾ ವ್ಯವಹಾರಕ್ಕಾಗಿ ಪ್ರಾರಂಭಿಸಲಾಗುವ ಎಲ್ಲಾ ವಿಧದ ವಾಣಿಜ್ಯ, ವಸತಿಯೇತರ ಚಟುವಟಿಕೆಗಳಿಗೆ ನೀಡಲಾಗುವ ಮತ್ತು ನವೀಕರಿಸಲಾಗುವ ಲೈಸೆನ್ಸ್ ಶುಲ್ಕಗಳು ಉದ್ದೇಶಿತ ಕಟ್ಟಡದ ಭಾಗದ ಪ್ರತಿ ಚದರ ಮೀಟರ್‌ಗೆ ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿ ದರಪಟ್ಟಿಯ ಅನುಬಂಧ-2 ರಲ್ಲಿನ ನಿವೇಶನ ದರಗಳ ಮಾರ್ಗಸೂಚಿ ದರ ಮತ್ತು ಅನುಬಂಧ-1(2) ರಲ್ಲಿನ ಪ್ರಸ್ತಾವಿತ ಕಟ್ಟಡದ ಮಾರ್ಗಸೂಚಿ ದರದ ಶೇಕಡ 0.40 ರಷ್ಟು ಇರತಕ್ಕದ್ದು;

(ii) ವಾಣಿಜ್ಯ, ವಸತಿಯೇತರ ವ್ಯವಹಾರ ಲೈಸೆನ್ಸ್ ಶುಲ್ಕ ಮತ್ತು ಘಟನೋತ್ತರ ಅನುಮತಿ ಶುಲ್ಕವು ಉದ್ದೇಶಿತ ಕಟ್ಟಡದ ಭಾಗದ ಕರ್ನಾಟಕ ಮುದ್ರಾಂಕ ಅಧಿನಿಯಮ 1957ರ 45ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿ ದರಪಟ್ಟಿಯ ಅನುಬಂಧ-2 ರಲ್ಲಿನ ನಿವೇಶನ ದರಗಳ ಮಾರ್ಗಸೂಚಿ ದರ ಮತ್ತು ಅನುಬಂಧ-1(2) ರಲ್ಲಿನ ಪ್ರಸ್ತಾವಿತ ಕಟ್ಟಡದ ಮಾರ್ಗಸೂಚಿ ದರದ ಶೇಕಡ 0.50ರಷ್ಟು ಇರತಕ್ಕದ್ದು.

(iii) ಮೇಲ್ಕಂಡಂತೆ ಲೈಸೆನ್ಸ್ ವಿತರಣೆ ಅಥವಾ ನವೀಕರಣ ಅಥವಾ ಘಟನೋತ್ತರ ಅನುಮತಿಗಳಿಗೆ ಸಂಬಂಧಿಸಿದಂತೆ ನಮೂನೆಗಳ ಮಾದರಿ ಹಾಗೂ ಪ್ರಕ್ರಿಯೆಗಳು ಸರ್ಕಾರವು ನಿಗಧಿಪಡಿಸಿದಂತೆ ಇರತಕ್ಕದ್ದು."

(ii) ಖಂಡ (ಒ) ರಲ್ಲಿ "ಕೋಷ್ಟಕ-8 ರಂತೆ" ಎಂಬ ಪದಗಳು ಮತ್ತು ಅಂಕಿಯ ನಂತರ "ಜಾರಿಯಲ್ಲಿರುವ ಕಾನೂನಿನ್ವಯ" ಎಂಬ ಪದಗಳನ್ನು ಸೇರಿಸತಕ್ಕದ್ದು.

**12. ಅನುಬಂಧ -1ರ ತಿದ್ದುಪಡಿ.-** ಸದರಿ ನಿಯಮಗಳ ಅನುಬಂಧ -1 ರ
(1) ಕ್ರಮ ಸಂಖ್ಯೆ; 1 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ ಈ ಕೆಳಗಿನದನ್ನು ಸೇರಿಸತಕ್ಕದ್ದು ಎಂದರೆ:-

| ಕ್ರ. ಸಂ | ವರ್ಗೀಕರಣ | ದಾಖಲೆಗಳು | ಷರಾ |
|---|---|---|---|
| (1-A) | ಗ್ರಾಮ ಠಾಣಾ * (ನೋಂದಾಯಿತ ದಾಖಲೆಗಳು ಲಭ್ಯವಿಲ್ಲದ ಕಟ್ಟಡಗಳ ಸಂದರ್ಭದಲ್ಲಿ) | 1. ದಿಶಾಂಕ್/ತಹಶೀಲ್ದಾರರ ಗ್ರಾಮ ಠಾಣಾ ನಕ್ಷೆ | ಕಡ್ಡಾಯ |
| | | 2. ದಿನಾಂಕ:07.04.2025 ರ ಪೂರ್ವದಲ್ಲಿನ ಕರ ನಿರ್ಧರಣಾ ವಹಿಯ ದೃಢೀಕೃತ ಪ್ರತಿ ಅಥವಾ ಪಂಚತಂತ್ರ ತಂತ್ರಾಂಶದಲ್ಲಿ ಪಿಐಡಿ ಸಂಖ್ಯೆಯು ನಮೂದಾಗಿರುವ ಬಗ್ಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ದೃಢೀಕರಣ. | ಕಡ್ಡಾಯ |
| | | 3. ವಿದ್ಯುತ್ ಬಿಲ್ ಅಥವಾ ಎಸ್ಕಾಂ ನ ಅಕೌಂಟ್ ಐಡಿ ಸ್ಟೇಟ್‌ಮೆಂಟ್ (ದಿನಾಂಕ: 07.04.2025 ರ ಪೂರ್ವದಲ್ಲಿನ) | ಕಡ್ಡಾಯ |
| | | 4. ಸ್ಥಳ ಮಹಜರ್ ಪ್ರತಿ (ಕಾರ್ಯದರ್ಶಿ ಲಾಗಿನ್‌ನಲ್ಲಿ) | ಕಡ್ಡಾಯ |

(2) ಕ್ರಮ ಸಂಖ್ಯೆ; 2 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಅಂದರೆ:-

| ಕ್ರ. ಸಂ | ವರ್ಗೀಕರಣ | ದಾಖಲೆಗಳು | ಷರಾ |
|---|---|---|---|
| 2 | ಸರ್ಕಾರದ ವಸತಿ ಯೋಜನೆಯಡಿ ಮಂಜೂರಾದ ಆಸ್ತಿ * | 1. ಸರ್ಕಾರದ ಹಕ್ಕು ಪತ್ರ/ ಸ್ವಾಧೀನ ಪತ್ರ /ನಿಗಮದ/ ಮಂಡಳಿಯ ಮಂಜೂರಾತಿ ಪತ್ರ/ ಹಕ್ಕು ಪತ್ರ ವಿತರಣಾ ಪ್ರಾಧಿಕಾರದ ದೃಢೀಕರಣ ಪತ್ರ | ಕಡ್ಡಾಯ |
| | | 2. ಋಣಭಾರ ಪ್ರಮಾಣ ಪತ್ರ | ಐಚ್ಛಿಕ |
| | | 3. ಸೇಲ್ ಡೀಡ್/ ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ | ಐಚ್ಛಿಕ |

| | | | |
|---|---|---|---|
| | | ವರ್ಗಾವಣೆ/ ಸೆಟ್ಲೆಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ / ಅದಲು ಬದಲು/ ಇತರೆ ಪತ್ರ (ನಮೂದಿಸಿ)/ ಅದಲು ಬದಲು/ ಇತರೆ ಪತ್ರ (ನಮೂದಿಸಿ) | |

(3) ಕ್ರಮ ಸಂಖ್ಯೆ; 3 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಅಂದರೆ:-

| ಕ್ರ. ಸಂ | ವರ್ಗೀಕರಣ | ದಾಖಲೆಗಳು | ಷರಾ |
|---|---|---|---|
| 3 | ಸ್ಥಳೀಯ ಯೋಜನಾ ಪ್ರದೇಶದಲ್ಲಿನ ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಸ್ಥಳೀಯ ಯೋಜನಾ ಪ್ರದೇಶದ ಹೊರ ಭಾಗದಲ್ಲಿ/ಸ್ಥಳೀಯ ಯೋಜನಾ ಪ್ರಾಧಿಕಾರದ ವಿನ್ಯಾಸ ಅನುಮೋದಿತ ಆಸ್ತಿ* | 1. ಭೂ ಪರಿವರ್ತನಾ ಆದೇಶ ಪತ್ರ / ಭೂ-ಪರಿವರ್ತನೆ ಉದ್ದೇಶಕ್ಕೆ ಪಾವತಿಸಲಾದ ಶುಲ್ಕದ ಗಣಕೀಕೃತ ಪ್ರತಿ | ಕಡ್ಡಾಯ |
| | | 2. ಪ್ರಾಥಮಿಕ ವಿನ್ಯಾಸ ಅನುಮೋದನೆ ಮತ್ತು ನಿವೇಶನ ಬಿಡುಗಡೆ ಆದೇಶ /ಅಂತಿಮ ವಿನ್ಯಾಸ ಅನುಮೋದನೆ ಮತ್ತು ನಿವೇಶನ ಬಿಡುಗಡೆ ಆದೇಶ | ಕಡ್ಡಾಯ |
| | | 3. ಅನುಮೋದಿತ ವಿನ್ಯಾಸ ನಕ್ಷೆ | ಕಡ್ಡಾಯ |
| | | 4. ನೊಂದಾಯಿತ ಪತ್ರ / ಪಹಣಿ (RTC) | ಕಡ್ಡಾಯ |
| | | 5. ನಿವೇಶನ ಹಂಚಿಕೆ ಪತ್ರ/ಸ್ವಾಧೀನ ಪತ್ರ | ಐಚ್ಚಿಕ |
| | | 6. ಋಣಭಾರ ಪ್ರಮಾಣ ಪತ್ರ | ಐಚ್ಚಿಕ |

(4) ಕ್ರಮ ಸಂಖ್ಯೆ; 6 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಅಂದರೆ:-

| ಕ್ರ. ಸಂ | ವರ್ಗೀಕರಣ | ದಾಖಲೆಗಳು | ಷರಾ |
|---|---|---|---|
| 6 | ಮಂಡಲ ಪಂಚಾಯತಿ ಅವಧಿಯ ಪೂರ್ವದಲ್ಲಿ ನೋಟಿಫೈಡ್ ಏರಿಯಾ ಸಮಿತಿಯಲ್ಲಿ ನಿರ್ವಹಿಸಲಾದ ಆಸ್ತಿ/ ಅಧಿಸೂಚಿತ ಪ್ರದೇಶದ ಆಸ್ತಿ* | 1. ಜಮಾಬಂದಿ ರಿಜಿಸ್ಟರ್ / ಮ್ಯುಟೇಷನ್ ರಿಜಿಸ್ಟರ್ | ಕಡ್ಡಾಯ |
| | | 2. ಋಣಭಾರ ಪ್ರಮಾಣ ಪತ್ರ | ಐಚ್ಚಿಕ |

(5) ಕ್ರಮ ಸಂಖ್ಯೆ; 9 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಅಂದರೆ:-

| ಕ್ರ. ಸಂ | ವರ್ಗೀಕರಣ | ದಾಖಲೆಗಳು | ಷರಾ |
|---|---|---|---|
| 9 | ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಪ್ರಕರಣ 94ಸಿ/ 94ಸಿಸಿ/ 94ಡಿ ರಡಿಯಲ್ಲಿ ಮಂಜೂರಾದ ಆಸ್ತಿ | 1. ಸರ್ಕಾರದ ಹಕ್ಕು ಪತ್ರ/ ಸ್ವಾಧೀನ ಪತ್ರ/ಮಂಜೂರಾತಿ ಆದೇಶ/ಪ್ರಮಾಣ ಪತ್ರ/ ಕಂದಾಯ ಇಲಾಖೆ ಹಕ್ಕುಪತ್ರ | ಕಡ್ಡಾಯ |

| | | | |
|---|---|---|---|
| | | ವಿತರಣಾ ಅಧಿಕಾರಿಯ ದೃಢೀಕರಣ ಪತ್ರ | |
| | | 2. ಋಣಭಾರ ಪ್ರಮಾಣ ಪತ್ರ | ಐಚ್ಚಿಕ |
| | | 3. ಕಂದಾಯ ಇಲಾಖೆ ಹಕ್ಕುಪತ್ರ ವಿತರಣಾ ಅಧಿಕಾರಿಯ ದೃಢಿಕರಣ ಪತ್ರ | ಕಡ್ಡಾಯ |
| | | 4. ಸೇಲ್ ಡೀಡ್/ ಸ್ವತ್ತಿನ ಕಾರ್ಡ್/ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ /ಅದಲು ಬದಲು/ ಇತರೆ ಪತ್ರ(ನಮೂದಿಸಿ) | ಐಚ್ಚಿಕ |

(6) ಕ್ರಮ ಸಂಖ್ಯೆ; 10 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಅಂದರೆ:-

| ಕ್ರ. ಸಂ | ವರ್ಗೀಕರಣ | ದಾಖಲೆಗಳು | ಷರಾ |
|---|---|---|---|
| 10 | ಪುನರ್ವಸತಿ ಯೋಜನೆಯ ಆಸ್ತಿ* | 1. ಸರ್ಕಾರದ ಹಕ್ಕು ಪತ್ರ/ ಸ್ವಾಧೀನ ಪತ್ರ | ಕಡ್ಡಾಯ |
| | | 2. ಅನುಮೋದಿತ ವಿನ್ಯಾಸ ನಕ್ಷೆ (ಮಂಜೂರಾತಿ ಪತ್ರ ನೀಡಿದ ಪ್ರಾಧಿಕಾರದಿಂದ ದೃಢಿಕರಿಸಿದ ನಕ್ಷೆ) | ಕಡ್ಡಾಯ |
| | | 3. ಋಣಭಾರ ಪ್ರಮಾಣ ಪತ್ರ | ಐಚ್ಚಿಕ |
| | | 4. ಸೇಲ್ ಡೀಡ್/ ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ / ಅದಲು ಬದಲು/ ಇತರೆ ಪತ್ರ(ನಮೂದಿಸಿ) | ಐಚ್ಚಿಕ |

(7) ಕ್ರಮ ಸಂಖ್ಯೆ; 13 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಅಂದರೆ:-

| ಕ್ರ. ಸಂ | ವರ್ಗೀಕರಣ | ದಾಖಲೆಗಳು | ಷರಾ |
|---|---|---|---|
| 13 | ಕೇಂದ್ರ ಸರ್ಕಾರ/ರಾಜ್ಯಸರ್ಕಾರ/ಸ್ಥಳೀಯ ಸಂಸ್ಥೆಗಳ ನಿವೇಶನ/ಕಟ್ಟಡ | ಪಹಣಿ (RTC) / ದಾನಪತ್ರ / ಖರೀದಿ ಪತ್ರ / ಮಂಜೂರಾತಿ ಪತ್ರ / ಪರಿತ್ಯಾಜನಾ ಪತ್ರ / ಗ್ರಾಮ ಪಂಚಾಯತಿ ಕರ ನಿರ್ಧರಣ ವಹಿ ಅಥವಾ ಗ್ರಾಮ ಪಂಚಾಯತಿ ಆಸ್ತಿ ವಹಿ | ಕಡ್ಡಾಯ |

(8) ಕ್ರಮ ಸಂಖ್ಯೆ; 14 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಅಂದರೆ:-

| ಕ್ರ. ಸಂ | ವರ್ಗೀಕರಣ | ದಾಖಲೆಗಳು | ಷರಾ |
|---|---|---|---|
| 14 | ಕರ್ನಾಟಕ ಭೂ-ಸುಧಾರಣಾ ಅಧಿನಿಯಮ 1961 ರಪ್ರಕರಣ 38ಎ ರಡಿಯಲ್ಲಿ ಮಂಜೂರಾದ ಆಸ್ತಿ | 1. ಸರ್ಕಾರದ ಹಕ್ಕು ಪತ್ರ/ ಸ್ವಾಧೀನ ಪತ್ರ/ಮಂಜೂರಾತಿ ಆದೇಶ/ಪ್ರಮಾಣ ಪತ್ರ/ ಕಂದಾಯ ಇಲಾಖೆ ಹಕ್ಕುಪತ್ರ ವಿತರಣಾ ಅಧಿಕಾರಿಯ ದೃಢೀಕರಣ ಪತ್ರ | ಕಡ್ಡಾಯ |
| | | 2. ಋಣಭಾರ ಪ್ರಮಾಣ ಪತ್ರ | ಐಚ್ಛಿಕ |
| | | 3. ಕಂದಾಯ ಇಲಾಖೆ ಹಕ್ಕುಪತ್ರ ವಿತರಣಾ ಅಧಿಕಾರಿಯ ದೃಢೀಕರಣ ಪತ್ರ | ಕಡ್ಡಾಯ |
| | | 4. ಸೇಲ್ ಡೀಡ್/ ಸ್ವತ್ತಿನ ಕಾರ್ಡ್/ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ /ಅದಲು ಬದಲು/ ಇತರೆ ಪತ್ರ(ನಮೂದಿಸಿ) | ಐಚ್ಛಿಕ |

(9) ಕ್ರಮ ಸಂಖ್ಯೆ; 15 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಅಂದರೆ:-

| ಕ್ರ. ಸಂ | ವರ್ಗೀಕರಣ | ದಾಖಲೆಗಳು | ಷರಾ |
|---|---|---|---|
| 15 | ನಿಗಮ/ಮಂಡಳಿ /ನಿಯಮಿತ/ಪ್ರಾಧಿಕಾರದ ನಿವೇಶನ/ಕಟ್ಟಡ* | 1. ಭೂ-ಸ್ವಾಧೀನ ಪತ್ರ/ ಮಂಜೂರಾತಿ ಪತ್ರ/ ಖರೀದಿ ಪತ್ರ | ಕಡ್ಡಾಯ |
| | | 2. ವಿನ್ಯಾಸ ನಕ್ಷೆ | ಐಚ್ಛಿಕ |

(10) ಕ್ರಮ ಸಂಖ್ಯೆ; 16 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಅಂದರೆ:-

| ಕ್ರ. ಸಂ | ವರ್ಗೀಕರಣ | ದಾಖಲೆಗಳು | ಷರಾ |
|---|---|---|---|
| 16 | ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮ 18 ರಡಿಯಲ್ಲಿ ಮಂಜೂರಾದ ಆಸ್ತಿ (ಮನೆದಳ / ಕಣಮನೆ) | 1. ಹಕ್ಕು ಪತ್ರ | ಕಡ್ಡಾಯ |
| | | 2.ಪಿತ್ರಾರ್ಜಿತ ದಾಖಲೆ | ಐಚ್ಛಿಕ |
| | | 3. ಪಹಣಿ (RTC) | ಕಡ್ಡಾಯ |
| | | 4.ಕಂದಾಯ ಇಲಾಖೆಯ ದೃಢೀಕರಣ ಪತ್ರ | ಕಡ್ಡಾಯ |
| | | 5. ಸೇಲ್ ಡೀಡ್/ ಸ್ವತ್ತಿನ ಕಾರ್ಡ್/ಪಿತ್ರಾರ್ಜಿತ ಆಸ್ತಿ/ಆಸ್ತಿ ವಿಭಜನೆ/ ಗಿಫ್ಟ್ ಡೀಡ್/ ವಿಲ್/ ಹಕ್ಕು ಪತ್ರ/ ರಿಲೀಜ್ ಡೀಡ್/ ವರ್ಗಾವಣೆ/ ಸೆಟ್ಲಮೆಂಟ್/ ನ್ಯಾಯಾಲಯದ ಆದೇಶ/ ಒಟ್ಟುಗೂಡಿಸು/ ವಿಭಾಗ ಪತ್ರ /ಅದಲು ಬದಲು/ ಇತರೆ ಪತ್ರ(ನಮೂದಿಸಿ) | ಐಚ್ಛಿಕ |

(11) ಅನುಬಂಧ-1 ರ * ಚಿಹ್ನೆ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು.

"ಪರಂತು ಮೇಲ್ಕಂಡ ವರ್ಗೀಕರಣಗಳಲ್ಲಿನ ಆಸ್ತಿಗಳು ಈಗಾಗಲೇ ವರ್ಗಾವಣೆಗೆ ಒಳಪಟ್ಟಿದ್ದಲ್ಲಿ ನೊಂದಾಯಿತ ಪತ್ರ ಹಾಗೂ ಋಣಭಾರ ಪ್ರಮಾಣ ಪತ್ರ (ನಮೂನೆ-15) ಅನ್ನು ಕಡ್ಡಾಯವಾಗಿ ತಂತ್ರಾಂಶದಲ್ಲಿ ಇಂಧೀಕರಿಸುವುದು. "

**13. ಅನುಬಂಧ- 2ರ ತಿದ್ದುಪಡಿ.-** ಸದರಿ ನಿಯಮಗಳ ಅನುಬಂಧ 2ರ,-

(1) ಕ್ರಮ ಸಂಖ್ಯೆ: 1 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು; ಅಂದರೆ:-

| ಕ್ರ. ಸಂ | ವರ್ಗೀಕರಣ | ದಾಖಲೆಗಳು | ಷರಾ |
|---|---|---|---|
| 1 | ನೊಂದಾಯಿತ ಪ್ರಮಾಣ ಪತ್ರ ಹೊಂದಿದ್ದು, ಮಾದರಿ ಕಟ್ಟಡ ಉಪವಿಧಿಗಳ ಉಪಬಂಧಗಳನ್ನು ಉಲ್ಲಂಘಿಸಿ ಕೃಷಿ ಜಮೀನಿನಲ್ಲಿನ ಅಥವಾ ಭೂ-ಪರಿವರ್ತಿತ ಜಮೀನಿನಲ್ಲಿನ ಕಟ್ಟಡಗಳು. | 1. ನೋಂದಾಯಿತ ಪ್ರಮಾಣ ಪತ್ರ | ಕಡ್ಡಾಯ |
| | | 2. ವಿದ್ಯುತ್ ಬಿಲ್ (ದಿನಾಂಕ: 07.04.2025 ರ ಪೂರ್ವದಲ್ಲಿನ) | ಕಡ್ಡಾಯ |
| | | 3. ಪಹಣಿ (RTC) | ಕಡ್ಡಾಯ |
| | | 4. ಭೂ- ಪರಿವರ್ತನೆ ಆದೇಶ | ಐಚ್ಚಿಕ |
| | | 5. ಋಣಭಾರ ಪ್ರಮಾಣ ಪತ್ರ (EC) | ಕಡ್ಡಾಯ |

(2) ಕ್ರಮ ಸಂಖ್ಯೆ: 4 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು; ಅಂದರೆ:-

| ಕ್ರ. ಸಂ | ವರ್ಗೀಕರಣ | ದಾಖಲೆಗಳು | ಷರಾ |
|---|---|---|---|
| 4 | ಬಡಾವಣೆ ವಿನ್ಯಾಸ ಅನುಮೋದನೆಯಿಲ್ಲದ, ಆದರೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ, ಉದ್ಯಾನವನ, ನಾಗರೀಕ ಸೌಕರ್ಯ ನಿವೇಶನ, ರಸ್ತೆಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 ರ ಪ್ರಕರಣ 17 ರನ್ವಯ ಗ್ರಾಮ ಪಂಚಾಯತಿಗೆ ಉಚಿತವಾಗಿ ಪರಿತ್ಯಾಜನಾ ಪತ್ರದ ಮೂಲಕ ವರ್ಗಾಯಿಸಿರುವ /ವರ್ಗಾಯಿಸಿಕೊಂಡು ಕಂದಾಯ ಭೂಮಿ/ ಭೂ-ಪರಿವರ್ತಿತ ಜಮೀನಿನಲ್ಲಿನ ನಿವೇಶನಗಳು | 1. ಪಹಣಿ (RTC) / ನೊಂದಾಯಿತ ಪತ್ರ | ಕಡ್ಡಾಯ |
| | | 2. ನೋಂದಾಯಿತ ಪರಿತ್ಯಾಜನಾ ಪತ್ರ | ಕಡ್ಡಾಯ |
| | | 3. ಭೂ-ಪರಿವರ್ತಿತ ಆದೇಶ | ಐಚ್ಚಿಕ |
| | | 4. ಋಣ ಭಾರ ಪ್ರಮಾಣ ಪತ್ರ (EC) | ಕಡ್ಡಾಯ |

(3) ಕ್ರಮ ಸಂಖ್ಯೆ: 5 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಾಗಿ ಈ ಕೆಳಕಂಡಂತೆ ಪ್ರತಿಯೋಜಿಸತಕ್ಕದ್ದು ಅಂದರೆ:-

| ಕ್ರ. ಸಂ | ವರ್ಗೀಕರಣ | ದಾಖಲೆಗಳು | ಷರಾ |
|---|---|---|---|
| 5 | ಭೂ-ಪರಿವರ್ತಿತ / ಭಾವಿತ ಭೂ-ಪರಿವರ್ತಿತ ಜಮೀನುಗಳು (ಏಕ ನಿವೇಶನ) | 1. ಭೂ-ಪರಿವರ್ತನೆ ಆದೇಶ / ಮಂಜೂರಾತಿ ಆದೇಶ | ಕಡ್ಡಾಯ |
| | | 2. ಪಹಣಿ | ಕಡ್ಡಾಯ |

(4) ಕ್ರಮ ಸಂಖ್ಯೆ: 5 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳು ಪ್ರತ್ಯಾಯೋಜಿಸ್ಪಟ್ಟ ತರುವಾಯ ಈ ಕೆಳಗಿನದನ್ನು ಸೇರಿಸತಕ್ಕದ್ದು ಅಂದರೆ:-

"

| ಕ್ರ. ಸಂ | ವರ್ಗೀಕರಣ | ದಾಖಲೆಗಳು | ಷರಾ |
|---|---|---|---|
| 6 | ಕೃಷಿ ಭೂಮಿಯಲ್ಲಿ ವಾಸ / ಕೃಷಿ ಉದ್ದೇಶಕ್ಕೆ ಮೂಲ ಮಾಲೀಕರು ಕಟ್ಟಿಸಿರುವ ಕಟ್ಟಡಗಳು | 1. ವಿದ್ಯುತ್ ಬಿಲ್ (ದಿನಾಂಕ: 07.04.2025 ರ ಪೂರ್ವದಲ್ಲಿನ) | ಕಡ್ಡಾಯ |
| | | 2. ಪಹಣಿ (RTC) (ಮೂಲ ಮಾಲೀಕರ ಹೆಸರಿನಲ್ಲಿರುವುದು) | ಕಡ್ಡಾಯ |
| | | 3. ಋಣಭಾರ ಪ್ರಮಾಣ ಪತ್ರ (EC) | ಕಡ್ಡಾಯ |
| 7 | ಕೃಷಿ ಭೂಮಿಯಲ್ಲಿ ವಸತಿ ಯೋಜನೆ ಅಡಿಯಲ್ಲಿ ಸೃಜನೆಯಾಗಿರುವ ಕಟ್ಟಡಗಳು (ವರ್ಗಾವಣೆಗೆ ಅವಕಾಶ ಇರುವುದಿಲ್ಲ) | 1. ದಿನಾಂಕ:07-04-2025 ರ ಪೂರ್ವದಲ್ಲಿ ವಸತಿ ಯೋಜನೆಯಡಿ ಮಂಜೂರಾದ ಆದೇಶದ ಪತ್ರ | ಕಡ್ಡಾಯ |
| | | 2. ಪಹಣಿ (RTC) | ಕಡ್ಡಾಯ |
| | | 3. ವಂಶವೃಕ್ಷ | ಕಡ್ಡಾಯ |
| | | 4. ಮನೆ ನಿರ್ಮಾಣ ಮಾಡಲು ಪಹಣಿ (RTC) ದಾರರ ಒಪ್ಪಿಗೆ ಪ್ರಮಾಣ ಪತ್ರ | ಕಡ್ಡಾಯ |
| 8 | ಅರಣ್ಯ ಹಕ್ಕು ಅಧಿನಿಯಮ 2006 ರ ಪ್ರಕರಣ 4 ರಡಿಯಲ್ಲಿ / ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪಾರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕು ಮಾನ್ಯತೆ) ನಿಯಮಗಳು 2008 ರಡಿ ಮಂಜೂರಾದ ಆಸ್ತಿ (ವರ್ಗಾವಣೆಯು ಕೇವಲ ಅನುವಂಶೀಯವಾಗಿರತಕ್ಕದ್ದು) | 1. ಹಕ್ಕು ಪತ್ರ | ಕಡ್ಡಾಯ |
| | | 2. ಪಿತ್ರಾರ್ಜಿತ ದಾಖಲೆ | ಕಡ್ಡಾಯ |
| | | 3. ಅರಣ್ಯ ಇಲಾಖೆ ಸಕ್ಷಮ ಪ್ರಾಧಿಕಾರದ ದೃಢೀಕರಣ ಪತ್ರ | ಕಡ್ಡಾಯ |

"

**14. ಅನುಬಂಧ- 3ರ ತಿದ್ದುಪಡಿ.-** ಸದರಿ ನಿಯಮಗಳ ಅನುಬಂಧ 3 ರ ಬದಲಾಗಿ ಈ ಕೆಳಗಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"ಅನುಬಂಧ-3**

(ನಿಯಮ-12(7))

"

| ಕ್ರ.ಸಂ. | ಮ್ಯುಟೇಶನ್ ವಿಧಗಳು | ಮ್ಯುಟೇಶನ್‌ಗಾಗಿ ಬೇಕಾಗಿರುವ ಮಾಹಿತಿ | ಷರಾ ಮತ್ತು ಬೇಕಾಗಿರುವ ದಾಖಲೆಗಳು | ನಮೂನೆ-11ಎ ಅಥವಾ 11ಬಿ ನಲ್ಲಿ ಬದಲಾವಣೆ / ಸೇರ್ಪಡೆ ವಿವರ |
|---|---|---|---|---|
| 1 | ಸೇಲ್ ಡೀಡ್ | ನೋಂದಣಿ ಆಗಿರುವ ಸ್ವತ್ತುಗಳು | ಕ್ರಯ ಪತ್ರ ಅಥವಾ ಜೆ-ಫಾರ್ಮ | ಮಾಲೀಕರ ವಿವರ |
| 2 | ಸದರಿ ಸ್ವತ್ತಿನ ಸಂಖ್ಯೆ (ಗ್ರಾ.ಪಂ. ದಾಖಲೆ ಪ್ರಕಾರ) | - | - | ಸದರಿ ಸ್ವತ್ತಿನ ಸಂಖ್ಯೆ |

| | | | | |
|---|---|---|---|---|
| 3 | ಆಸ್ತಿಯ ಪ್ರಕಾರ | - | ಪೂರ್ಣಗೊಂಡ ಪ್ರಮಾಣ ಪತ್ರ / ಬಳಕೆ ಯೋಗ್ಯ ಪ್ರಮಾಣ ಪತ್ರ (Completion Certificate / Occupancy Certificate) | ನಿವೇಶನದಿಂದ ಕಟ್ಟಡ / ಕಟ್ಟಡದಿಂದ ನಿವೇಶನ |
| 4 | ಕಟ್ಟಡದ ಮೇಲ್ಛಾವಣಿ ತರಹೆ | - | - | ಕಟ್ಟಡದ ಮೇಲ್ಛಾವಣಿ ತರಹೆ (RCC/SHEET/MUD ROOF) |
| 5 | ಗಿಫ್ಟ್ ಡೀಡ್ | ನೋಂದಣಿ ಆಗಿರುವ ಸ್ವತ್ತುಗಳು | ಕಾಣಿಕೆ ಪತ್ರ ಅಥವಾ ಜೆ-ಫಾರ್ಮ | ಮಾಲೀಕರ ವಿವರ |
| 6 | ವಿಲ್ | ನೋಂದಣಿ ಆಗಿರುವ ಸ್ವತ್ತುಗಳು | ವಿಲ್ ದಾಖಲೆ ಅಥವಾ ಉಯಿಲು ಪತ್ರ | ಮಾಲೀಕರ ವಿವರ |
| 7 | ಪಿತ್ರಾರ್ಜಿತ ಆಸ್ತಿ (ಪೌತಿ ಖಾತೆ) | ನೋಂದಣಿ ಮತ್ತು ನೋಂದಣಿ ಆಗದಿರುವ ಎರಡೂ ಸ್ವತ್ತುಗಳಿಗೂ | ನೋಂದಾಯಿತ ಪತ್ರ/ ವಂಶವೃಕ್ಷ | ಮಾಲೀಕರ ವಿವರ |
| 8 | ಒಟ್ಟುಗೂಡಿಸು | - | ಹಕ್ಕು ಬಿಡುಗಡೆ ಪತ್ರ ಅಥವಾ ಜೆ-ಫಾರ್ಮ್, ಹಕ್ಕುಪತ್ರ, LPA ಯಿಂದ ಅನುಮೋದನೆ ಆದೇಶಗಳು | ಆಸ್ತಿಗಳ ಒಟ್ಟುಗೂಡಿಸುವಿಕೆ<br><br>(ಮಾಲೀಕರ ವಿವಿಧ ಬದಲಾವಣೆ ಇರುವುದಿಲ್ಲ) |
| 9 | ಆಸ್ತಿಯ ವಿಭಜನೆ | - | LPA ಯಿಂದ ಅನುಮೋದನೆ ಆದೇಶಗಳು | ಆಸ್ತಿಗಳ ವಿಭಜನೆ<br><br>(ಮಾಲೀಕರ ವಿವಿಧ ಬದಲಾವಣೆ ಇರುವುದಿಲ್ಲ) |
| 10 | ಹಕ್ಕು ಮತ್ತು ಋಣಗಳ ಬದಲಾವಣೆ | ನೋಂದಣಿ ಮತ್ತು ನೋಂದಣಿ ಆಗದಿರುವ ಎರಡೂ ಸ್ವತ್ತುಗಳಿಗೂ | - | ಹಕ್ಕುಗಳು ಮತ್ತು ಹೊಣೆಗಾರಿಕೆಗಳ ಬದಲಾವಣೆ |
| 11 | ಆಸ್ತಿಯ ವಿಧ | - | - | ವಾಸ ಯೋಗ್ಯದಿಂದ ವಾಣಿಜ್ಯ ಉಪಯೋಗಕ್ಕೆ ಅದಲು ಬದಲು |
| 12 | ವಿಭಾಗ ಪತ್ರ | ನೋಂದಣಿ ಆಗಿರುವ | ನೋಂದಾಯಿತ ವಿಭಾಗ ಪತ್ರ | ಉತ್ತರಾಧಿಕಾರಿಗಳ ನಡುವೆ ಆಸ್ತಿ ವಿಭಾಗ |
| 13 | ನ್ಯಾಯಾಲಯದ ಆದೇಶ | ನೋಂದಣಿ ಆಗದಿರುವ ಸ್ವತ್ತುಗಳು | ನ್ಯಾಯಾಲಯದ ಆದೇಶಗಳು | ಆಸ್ತಿಯ ಮತ್ತು ಮಾಲೀಕರ ವಿವರ |
| 14 | ಹಕ್ಕು ಬಿಡುಗಡೆ ಪತ್ರ | ನೋಂದಣಿ ಆಗಿರುವ ಸ್ವತ್ತುಗಳು | (Relinquishment Deed) ತ್ಯಾಗ ಪತ್ರ | ಮಾಲೀಕರ ವಿವರ, ಹಕ್ಕುಗಳು ಮತ್ತು ಹೊಣೆಗಾರಿಕೆಗಳು |
| 15 | ಕೋರ್ಟ್ ತಡೆ ಆಜ್ಞೆ | ನೋಂದಣಿ ಆಗದಿರುವಸ್ವತ್ತುಗಳು | ಕೋರ್ಟ್ ತಡೆ ಆಜ್ಞೆ ಆದೇಶಗಳು | ಹಕ್ಕುಗಳು ಮತ್ತು ಹೊಣೆಗಾರಿಕೆಗಳು |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | | | | |
|---|---|---|---|---|
| 16 | ಕೋರ್ಟ್ ತಡೆ ಆಜ್ಞೆ ಬಿಡುಗಡೆ | ನೋಂದಣಿ ಆಗದಿರುವ ಸ್ವತ್ತುಗಳು | ಕೋರ್ಟ್ ತಡೆ ಬಿಡುಗಡೆ ಆದೇಶಗಳು | ಹಕ್ಕುಗಳು ಮತ್ತು ಹೊಣೆಗಾರಿಕೆಗಳು |
| 17 | ಅದಲು ಬದಲು | ನೋಂದಣಿ ಆಗಿರುವ ಸ್ವತ್ತುಗಳು | ಎಕ್ಸ ಚೇಂಜ್ ಡೀಡ್ (ಇಲ್ಲಿ ಹೆಚ್ಚಿನ ಸ್ವತ್ತುಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಇದೆ) | ಮಾಲೀಕರ ವಿವರ (ಮಾಲೀಕರ ಬದಲಾವಣೆ ಸಾಧ್ಯ) |
| 18 | ಹರಾಜು ಮಾರಾಟ ಕ್ರಯ ಪತ್ರ | ನೋಂದಣಿ ಆಗಿರುವ ಸ್ವತ್ತುಗಳು | ಸೇಲ್ ಆಫ್ ಸರ್ಟಿಫಿಕೇಟ್ ಮತ್ತು ಬ್ಯಾಂಕ್ ಹರಾಜು ಪತ್ರ | ಮಾಲೀಕರ ವಿವರ |
| 19 | ಮರು ಸಂಗ್ರಹಿಸಿ | ನೋಂದಣಿ ಆಗಿರುವ ಸ್ವತ್ತುಗಳು | ಕ್ಯಾನ್ಸಲೇಷನ್ ಡೀಡ್ ಮತ್ತು ನೋಂದಾಯಿತ ಪತ್ರ | ಮಾಲೀಕರ ವಿವರ |
| 20 | ಸ್ಥಿರ ಆಸ್ತಿಯ ಗುತ್ತಿಗೆ | ನೋಂದಣಿ ಆಗಿರುವ ಸ್ವತ್ತುಗಳು | ನೋಂದಾಯಿತ ಪತ್ರ | ಹಕ್ಕುಗಳು ಮತ್ತು ಹೊಣೆಗಾರಿಕೆಗಳು |
| 21 | ಅಡಮಾನ | ನೋಂದಣಿ ಆಗಿರುವ ಸ್ವತ್ತುಗಳು | ನೋಂದಾಯಿತ ಪತ್ರ | ಹಕ್ಕುಗಳು ಮತ್ತು ಹೊಣೆಗಾರಿಕೆಗಳು |
| 22 | ಸ್ವಾಧೀನವಿಲ್ಲದೆ ಅಡಮಾನ | ನೋಂದಣಿ ಆಗಿರುವ ಸ್ವತ್ತುಗಳು | ನೋಂದಾಯಿತ ಪತ್ರ | ಹಕ್ಕುಗಳು ಮತ್ತು ಹೊಣೆಗಾರಿಕೆಗಳು |
| 23 | ಒಳಗುತ್ತಿಗೆ | ನೋಂದಣಿ ಆಗಿರುವ ಸ್ವತ್ತುಗಳು | ನೋಂದಾಯಿತ ಪತ್ರ | ಹಕ್ಕುಗಳು ಮತ್ತು ಹೊಣೆಗಾರಿಕೆಗಳು |
| 24 | First Sale of Flat/Apartment (Sale from Promoter to the Purchaser) | ನೋಂದಣಿ ಆಗಿರುವ ಸ್ವತ್ತುಗಳು | ಕ್ರಯ ಪತ್ರ ಅಥವಾ ಜೆ-ಫಾರ್ಮ | ಮಾಲೀಕರ ವಿವರ |
| 25 | Sale of Flat/Apartment (By BDA/KHB) | ನೋಂದಣಿ ಆಗಿರುವ ಸ್ವತ್ತುಗಳು | ಕ್ರಯ ಪತ್ರ ಅಥವಾ ಜೆ-ಫಾರ್ಮ | ಮಾಲೀಕರ ವಿವರ |
| 26 | Second Sale of Flat/Apartment (Sale from Purchaser of Flat to Other) | ನೋಂದಣಿ ಆಗಿರುವ ಸ್ವತ್ತುಗಳು | ಕ್ರಯ ಪತ್ರ ಅಥವಾ ಜೆ-ಫಾರ್ಮ | ಮಾಲೀಕರ ವಿವರ |

*** ಮ್ಯುಟೇಶನ್ ಅವಧಿ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಿದಂತೆ ಇರತಕ್ಕದ್ದು."**

**15. ಕೋಷ್ಟಕ-4ರ ತಿದ್ದುಪಡಿ.-** ಸದರಿ ನಿಯಮಗಳ ಕೋಷ್ಟಕ 4 ರಲ್ಲಿ "(ಉತ್ಪಾದನಾ ಸಾಮರ್ಥ್ಯದ ಆಧಾರದಲ್ಲಿ)" ಎಂಬ ಆವರಣ ಮತ್ತು ಪದಗಳನ್ನು ಬಿಟ್ಟುಬಿಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಕೃಷ್ಣಮೂರ್ತಿ ಕೆ.ಹೆಚ್.)**
ನಿರ್ದೇಶಕರು (ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU Digitally signed by P S BASAVARAJU